ಗಿರೀಶ ಕಾರ್ನಾಡ್, ಗಿರೀಶ ಕಾಸರವಳ್ಳಿ, ಸಿದ್ದಲಿಂಗಯ್ಯ, ಪುಟ್ಟಣ್ಣ ಕಣಗಾಲ್ ಅವರಂಥ ಪ್ರತಿಭಾವಂತ ನಿರ್ದೇಶಕರು ಕನ್ನಡ ಚಿತ್ರರಂಗಕ್ಕೆ ಹೊಸ ವ್ಯಾಕರಣವನ್ನು ಪರಿಚಯಿಸತೊಡಗಿದರು. ರಾಜ್‌ಕುಮಾರ್ ಅವರಂಥ ಸಮ್ಮೋಹಕಶಕ್ತಿ ರೂಪುಗೊಂಡಿತು. ಹೊಸ ಅಲೆಯ ಚಿತ್ರಗಳ ಜೊತೆಗೆ, ಜನಪ್ರಿಯ ಧಾರೆಯ ಮಹೋನ್ನತ ಸಿನಿಮಾಗಳು ಏಕಕಾಲದಲ್ಲಿ ರೂಪುಗೊಂಡು ಜನರನ್ನು ತಲುಪತೊಡಗಿದವು. 'ಚೋಮನದುಡಿ', 'ಕಾಡು', 'ವಂಶವೃಕ್ಷ', 'ಘಟಶ್ರಾದ್ಧ'ದಂಥ ಚಿತ್ರಗಳು ಒಂದೆಡೆಯಾದರೆ, 'ಗಂಧದಗುಡಿ', 'ಬಂಗಾರದ ಮನುಷ್ಯ', 'ಭಕ್ತ ಕುಂಬಾರ', 'ಎರಡು ಕನಸು', 'ಸಂಪತ್ತಿಗೆ ಸವಾಲ್', 'ಬೂತಯ್ಯನ ಮಗ ಅಯ್ಯು' ರೀತಿಯ ಸಿನಿಮಾಗಳು ಇನ್ನೊಂದೆಡೆ ರೂಪುಗೊಳ್ಳತೊಡಗಿದವು. ಜನಪ್ರಿಯತೆ, ಜನಪರತೆಯೊಂದಿಗೆ ಕಲಾತ್ಮಕ ಹಂಬಲವೂ ಸೇರಿಕೊಂಡು ರೂಪುಗೊಂಡ ಸಿನಿಮಾಗಳು ಕನ್ನಡ ಸಿನಿಮಾ ಮತ್ತು ಪ್ರೇಕ್ಷಕರ ನಡುವಿನ ಸಂಬಂಧವನ್ನು ಗಾಢಗೊಳಿಸಿದವು.

ಹೊಸ ಅಲೆಯ ಸಿನಿಮಾಗಳು ಪ್ರಶಸ್ತಿ ಪುರಸ್ಕಾರಗಳನ್ನು ಗಳಿಸಿಯಷ್ಟೇ ಸುದ್ದಿ ಮಾಡಲಿಲ್ಲ. ಚಿತ್ರಮಂದಿರಗಳಲ್ಲಿ ತೆರೆಕಂಡು ಯಶಸ್ಸನ್ನೂ ಪಡೆದವು. 'ಸಂಸ್ಕಾರ', 'ಘಟಶ್ರಾದ್ಧ'ದಂಥ ಸಿನಿಮಾಗಳನ್ನು ಎಲ್ಲ ವರ್ಗಗಳ ಪ್ರೇಕ್ಷಕರೂ ನೋಡಿ ಮೆಚ್ಚಿಕೊಂಡರು. 'ನಾಂದಿ' ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿ ದೊರೆಯದೆ ಹೋದುದನ್ನು ವಿರೋಧಿಸಿ ಕನ್ನಡ ಚಿತ್ರರಸಿಕರು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಮೆರವಣಿಗೆ ನಡೆಸಿದ್ದುದನ್ನು ಕೂಡ ಸಿನಿಮಾ–ಪ್ರೇಕ್ಷಕರ ನಡುವಣ ಅನುಬಂಧದ ರೂಪದಲ್ಲಿಯೇ ನೋಡಬೇಕು.

ರಾಜ್ಯ ಸರ್ಕಾರ ಆರಂಭಿಸಿದ ಪ್ರಶಸ್ತಿ ಹಾಗೂ ಸಹಾಯಧನದ ಕಾರ್ಯಕ್ರಮಗಳು ಕೂಡ ಕನ್ನಡ ಚಿತ್ರರಂಗದ ಬೆಳವಣಿಗೆಗೆ ಒತ್ತಾಸೆಯಾಗಿ ಪರಿಣಮಿಸಿದವು.

## ರಾಜ್‌ಕುಮಾರ್ ಎನ್ನುವ ಕಲ್ಪವೃಕ್ಷ

'ಬೇಡರ ಕಣ್ಣಪ್ಪ' (1954) ಸಿನಿಮಾದ ಮೂಲಕ ಚಿತ್ರರಂಗಕ್ಕೆ ಪರಿಚಿತರಾದ ರಾಜ್‌ಕುಮಾರ್, ನಂತರದ ಎರಡು ದಶಕಗಳಲ್ಲಿ ಕನ್ನಡ ಸಿನಿಮಾದ ಮೇರುನಟನಾಗಿ ಬೆಳೆದದ್ದು ಮಾತ್ರವಲ್ಲ, ಕನ್ನಡ ಸಾಂಸ್ಕೃತಿಕ ಲೋಕದ ಪ್ರಮುಖ ಶಕ್ತಿಯಾಗಿಯೂ ರೂಪುಗೊಂಡಿದ್ದು ಆಧುನಿಕ ಕರ್ನಾಟಕದ ಪ್ರಮುಖ ವಿದ್ಯಮಾನಗಳಲ್ಲೊಂದು. ರಾಜ್ ಸಿನಿಮಾಗಳು ಕನ್ನಡ ಪ್ರೇಕ್ಷಕರ ಬಳಗವನ್ನು ವಿಸ್ತರಿಸುವ ಮೂಲಕ ಕನ್ನಡ ಸಿನಿಮಾ ಮಾರುಕಟ್ಟೆಯ ವ್ಯಾಪ್ತಿಯನ್ನೂ ಹಿಗ್ಗಲಿಸಿದವು. ಎಲ್ಲ ವರ್ಗ–ವಯೋಮಾನದ ಜನರೂ ಕನ್ನಡ ಸಿನಿಮಾಗಳನ್ನು ನೋಡುವ ಮೂಲಕ, ಉದ್ಯಮ–ಪ್ರೇಕ್ಷಕರ ನಡುವಣ ನಂಟು ಮತ್ತಷ್ಟು ಗಾಢವಾಯಿತು. ಈ ಅನುಬಂಧದ ಭಾಗವಾಗಿ ಅಭಿಮಾನಿಗಳನ್ನು ದೇವರುಗಳೆಂದು ರಾಜ್ ಕರೆದುದನ್ನು ಗಮನಿಸಬೇಕು. ಸಂಕಷ್ಟ ಎದುರಾದಾಗಲೆಲ್ಲ ಚಿತ್ರೋದ್ಯಮ ರಾಜ್‌ಕುಮಾರ್ ಅವರತ್ತ ನೋಡುತ್ತಿತ್ತು ಹಾಗೂ ರಾಜ್ ಹೆಸರಿನ ಜೊತೆಗೆ ಲಕ್ಷಾಂತರ ಅಭಿಮಾನಿಗಳ ಬಲವೂ ಇದ್ದುದರಿಂದ ಚಿತ್ರೋದ್ಯಮದ ಸಂಕಷ್ಟಗಳು ಸುಲಭವಾಗಿ ಬಗೆಹರಿಯುತ್ತಿದ್ದವು.


## ಈ ದಿನಗಳು...

ಕನ್ನಡ ಚಿತ್ರೋದ್ಯಮಕ್ಕೀಗ ಎರಡು ಬಗೆಯ ಬಿಕ್ಕಟ್ಟು. ಮೊದಲನೆಯದು, ರಾಜ್‌ಕುಮಾರ್ ನಿಧನದ ನಂತರ ಚಿತ್ರೋದ್ಯಮವನ್ನು ಸಮರ್ಥವಾಗಿ ಮುನ್ನಡೆಸುವಂಥ ನಾಯಕ ದೊರೆಯದಿದ್ದುದು. ಎರಡನೆಯದು, ಕನ್ನಡ ಪ್ರೇಕ್ಷಕರ ಭಾವಕೋಶದಿಂದ ಸಿನಿಮಾ ದೂರವಾಗಿರುವುದು.

ಅಂಬರೀಷ್, ರವಿಚಂದ್ರನ್, ಶಿವರಾಜ್‌ಕುಮಾರ್ ಅವರಲ್ಲಿ ನಾಯಕತ್ವದ ಗುಣಗಳು ಕಾಣಿಸಿದ್ದರೂ, ರಾಜ್‌ಕುಮಾರ್ ನಂತರ ಕನ್ನಡ ಚಿತ್ರೋದ್ಯಮದ ಕೇಂದ್ರದಲ್ಲಿ ನಿಲ್ಲುವುದು ಯಾರೊಬ್ಬರಿಗೂ ಸಾಧ್ಯವಾಗಿಲ್ಲ. ನಾಯಕತ್ವದ ಕೊರತೆಯಿಂದಾಗಿಯೇ, ಚಿತ್ರೋದ್ಯಮದ ಸಮಸ್ಯೆಗಳು ಹಾದಿಬೀದಿ ಜಗಳಗಳಾಗಿ ಕಾಣಿಸಿಕೊಳ್ಳುತ್ತಿವೆಯೇ ಹೊರತು, ಅವುಗಳಿಗೆ ಉತ್ತರ ಕಂಡುಕೊಳ್ಳುವ ಗಂಭೀರ ಪ್ರಯತ್ನಗಳು ನಡೆದಿಲ್ಲ.

ಸಿನಿಮಾಮತ್ತು ಪ್ರೇಕ್ಷಕರನಡುವೆಉಂಟಾಗಿರುವ ಕಂದರವನ್ನು ಚಿತ್ರೋದ್ಯಮ ಗಂಭೀರವಾಗಿ ಪರಿಗಣಿಸಿದಂತಿಲ್ಲ. 'ಚಿತ್ರಮಂದಿರಗಳಿಗೆ ಜನ ಬರುತ್ತಿಲ್ಲ' ಎಂದು ದೂರುವ ಚಿತ್ರೋದ್ಯಮದ ಮಂದಿ, 'ಜನ ಚಿತ್ರಮಂದಿರಗಳಿಗೆ ಏಕೆ ಬರುತ್ತಿಲ್ಲ?' ಎನ್ನುವುದರ ಬಗ್ಗೆ ಗಂಭೀರವಾಗಿ ಚಿಂತಿಸಿದಂತಿಲ್ಲ; ಸಿನಿಮಾಗಳಿಂದ ಜನ ವಿಮುಖವಾಗಿರುವುದರ ಹಿಂದೆ ಇರಬಹುದಾದ ತಮ್ಮ ಲೋಪಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವುದರ ಅಭ್ಯಾಸವೂ ಚಿತ್ರರಂಗಕ್ಕಿಲ್ಲ.

ಅರವತ್ತರ ದಶಕದಲ್ಲಿ ಕನ್ನಡ ಚಳವಳಿಕಾರರು ಡಬ್ಬಿಂಗ್ ವಿರೋಧಿ ಸೊಲ್ಲು ಎತ್ತಿದರಷ್ಟೇ. ಅದೇ ಚಳವಳಿಕಾರರು, ಬದಲಾದ ಸಂದರ್ಭದಲ್ಲಿ ಡಬ್ಬಿಂಗ್ ಪರವಾಗಿ ನಿಂತದ್ದನ್ನು ಚಿತ್ರರಂಗ 'ಸಹಜ ಪ್ರಕ್ರಿಯೆ' ಎನ್ನುವಂತೆ ಸಲೀಸಾಗಿ ಒಪ್ಪಿಕೊಂಡಿತು. ಡಬ್ಬಿಂಗ್ ಪರವಾದ ಸೊಲ್ಲು ಗಟ್ಟಿಯಾಗಿ ಕೇಳಿಸಿದಾಗಲೇ ಸಿನಿಮಾಮಂದಿ ಎಚ್ಚೆತ್ತುಗೊಳ್ಳಬೇಕಿತ್ತು. ಆ ಸೊಲ್ಲು, ಕನ್ನಡ



ಹೊಸ ಅಲೆಯ 'ಕಾಡು'ವ ಚಿತ್ರ




ಕಾದಂಬರಿ ಆಧಾರಿತ ಚಿತ್ರಗಳಿಗೆ ಮುನ್ನುಡಿ ಬರೆದ 'ಕರುಣೆಯೇ ಕುಟುಂಬದ ಕಣ್ಣು' ಸಿನಿಮಾ